



# ಬಣ್ಣದ ಕಾಟಿ

■ ಕೇಶವರೆಡ್ಡಿ ಹಂದ್ರಾಳ

'ನೋಡಬೇಕು, ನೋಡಿಯೂ ನೋಡದಂತಿರಬೇಕು
ನೋಡಬೇಕು, ನೋಡುವ ನೋಟದಲಿ ತಾನಿಲ್ಲದಿರಬೇಕು...'

-ಬಸವಣ್ಣ

ಯಾರು ಮಿನುಗುವ ನಕ್ಷತ್ರಗಳನ್ನು ಆಗಸದ ಹಣೆಗೆ ಅಂಟಿಸಿದವರು? ಯಾರು ಅವುಗಳನ್ನು ಕೊಯ್ದು ತಂದು ನನ್ನ ಜಡೆಗೆ ಮುಡಿಸಿದವರು? ಕಾಮನಬಿಲ್ಲನ್ನು ನನ್ನ ಕಣ್ಣುಗಳಲ್ಲಿ ಮೂಡಿಸಿದವರು ಯಾರು? ಯಾರು ದುಂಬಿಗಳ ಝೇಂಕಾರವನ್ನು ಸಂಗೀತವನ್ನಾಗಿಸಿ ನನ್ನ ಕಿವಿಗಳಿಗೆ ಹರಿಸಿದವರು? ಮಂಜಿನ ಹನಿಗಳ ಬಿಡಿ ಬಿಡಿಯಾಗಿ ಬಿಡಿಸಿ ತಂದು ನನ್ನ ಮುಂಗುರುಳಿಗೆ ಯಾರು ಪೋಣಿಸಿದವರು? ಹಿಮದ ತೆರೆಯನ್ನು ನನ್ನ ಮೈಗೆ ಯಾರು ಹೊದಿಸಿದವರು? ಚಿಟ್ಟೆಗಳ ಬಣ್ಣಗಳನ್ನು ನನ್ನ ತುಟಿಗಳಿಗೆ ಹಚ್ಚಿದವರು ಯಾರು? ಯಾರು ಕೋಗಿಲೆಯ ಇಂಚರವನ್ನು ನನ್ನ ಕಂಠಕ್ಕೆ ಇಳಿಸಿದವರು? ಮೋಡಗಳ ತುಂಡುಗಳನ್ನು ಹೆಕ್ಕಿ ತಂದು ನನ್ನ ತೋಳುಗಳ ಮೇಲೆ ಹಚ್ಚೆ ಹಾಕಿಸಿದವರು ಯಾರು? ಕೋಲ್ಮಿಂಚುಗಳನ್ನು ಬಾಚಿ ತಂದು ನನ್ನ ಕಣ್ಣರೆಪ್ಪೆಗಳ ಕಾಡಿಗೆಯಾಗಿಸಿದವರು ಯಾರು? ಕೋಟಿ, ಕೋಟಿ ಕನಸುಗಳನ್ನು ನನ್ನ ಹಾಸಿಗೆ, ದಿಂಬುಗಳ ಮೇಲೆ ಸುರಿದವರು ಯಾರು? ಕನಸುಗಳು ಅರಳುತ್ತಿರುವಾಗಲೇ ಅವುಗಳ ಮೇಲೆ ಬೂಟುಗಾಲುಗಳನ್ನಿಟ್ಟು ಹೊಸಕಿ ಹಾಕಿದವರು ಯಾರು? ನನ್ನ ಎದೆಗೂಡಿಗೆ ಸಾವಿರ ಸಾವಿರ ಚೇಳುಗಳನ್ನು ಇಳಿ ಬಿಟ್ಟವರು ಯಾರು? ನನ್ನ ಕರುಳಿಗೆ ನೂರಾರು ಕತ್ತರಿಗಳನ್ನು ಇಟ್ಟವರು ಯಾರು?

ಓ ಚಿನಾಲಿ ಚಂದ್ರಮ, ನಾನು ಮುಂಬಯಿಯ ಸಂಜೆಯ ಮಬ್ಬುಗತ್ತಲಿನಲ್ಲಿ ಬರಿಗಾಲಲ್ಲಿ ಫುಟ್‌ಪಾತ್‌ನ ಮೇಲೆ ನಿಂತು ಕೇಳುತ್ತಿರುವ ಈ ಪ್ರಶ್ನೆಗಳಿಗೆ ನೀನು ಕಿವುಡನಂತೆ ನಟಿಸುತ್ತಾ ನಗುತ್ತಾ ಆಗಸದಲ್ಲಿ ಸಂಭ್ರಮದಿಂದ ಓಲಾಡುತ್ತಿರುವೆ. ಪುಟ್ಟ ಮಗುವಾಗಿರುವಾಗ ನಾನೂ ಕೂಡ ನಿನ್ನನ್ನು ನೋಡಿ ನಗುತ್ತಿದ್ದದ್ದುಂಟು. ಆಗಸದಲ್ಲಿ ದಿಕ್ಕೆಟ್ಟವನಂತೆ ಓಡುತ್ತಿದ್ದ ನಿನ್ನನ್ನು ತೋರಿಸಿ ಅಮ್ಮ ಅನ್ನದ ತುತ್ತನ್ನು ಬಾಯಿಗಿಡುತ್ತಿದ್ದಳು. ಒಮ್ಮೊಮ್ಮೆ ಬಿಡುವಾಗಿದ್ದಾಗ ನೀನೆಲ್ಲಿ ಒಂದು ತುತ್ತನ್ನು ನುಂಗಿ ಹಾಕುವೆಯೋ ಎಂದು ಹೆದರಿ ಅಮ್ಮನಿಟ್ಟ ತುತ್ತನ್ನು ನುಂಗಿ ಚಪ್ಪಾಳೆ ತಟ್ಟುತ್ತಾ ನಿನ್ನನ್ನು ನೋಡಿ ನಗುತ್ತಿದ್ದೆ. ನೀನೊಮ್ಮೆಯಾದರೂ ಬಂದು ಅನ್ನದ ತುತ್ತನ್ನು ಕಸಿದುಕೊಂಡವನಲ್ಲ. ಅಲ್ಲದೆ ಪುಕ್ಕಲನಂತೆ ಹೆದರಿಕೊಂಡು ನಿಲ್ಲದೆ ಸದಾ ಓಡುತ್ತಿದ್ದೆ. ಆಗೆಲ್ಲ ಅಮ್ಮನನ್ನು 'ಅಮ್ಮಜಾನ್ ಯಾಕೆ ಚಂದ್ರ ನಿಲ್ಲದೆ ಸದಾ ಓಡುತ್ತಿರುತ್ತಾನೆ....' ಎಂದು ಕೇಳುತ್ತಿದ್ದೆ. ಅಮ್ಮ ನಗುತ್ತಾ 'ನಿನ್ನನ್ನು ಕಂಡರೆ ಚಂದ್ರನಿಗೆ ತುಂಬಾ ಭಯ. ಹಾಗಾಗಿ ತಪ್ಪಿಸಿಕೊಳ್ಳಲು ಓಡುತ್ತಿದ್ದಾನೆ...' ಎಂದು ಉತ್ತರಿಸುತ್ತಿದ್ದಳು. ಒಂದೆರಡು ವರ್ಷಗಳಲ್ಲೇ ತಿಳಿಯಿತು ನನಗೆ ಅಮ್ಮ ಸುಳ್ಳು ಹೇಳುತ್ತಿದ್ದಾಳೆಂದು. ನನ್ನ ದುಡಿಮೆಯ, ಖ್ಯಾತಿಯ, ಸುಖದ, ಸಂಕಟದ ಗಡಿಬಿಡಿಯಲ್ಲಿ ನಂತರ ನೀನು ಕಣ್ಣಿಗೆ ಬಿದ್ದದ್ದೇ ಅಪರೂಪ.

ಕ್ಷಮೆ ಇರಲಿ ಚಂದ್ರಮ್ಮ ನಿನ್ನನ್ನು 'ಚಿನಾಲಿ' ಎಂದು ಕರೆದದ್ದಕ್ಕೆ. ಈ ಮುಂಬಯಿಯಲ್ಲಿ ಬುದ್ಧಿವಂತರಿಗೂ ಕೂಡ ಚಿನಾಲಿ ಎಂದು ಕರೆಯುತ್ತಾರೆ. ನಾನು ಕೂಡ ಅನೇಕ ಬಾರಿ ಎಷ್ಟೋ ಜನರಿಂದ ಚಿನಾಲಿ ಎಂದು ಕರೆಸಿಕೊಂಡಿದ್ದೇನೆ. ಹಾಗೆ ನೋಡಿದರೆ ಈ ಮುಂಬಯಿಯ ತುಂಬಾ ಚಿನಾಲಿಗಳೇ ತುಂಬಿ ತುಳುಕುತ್ತಿದ್ದಾರೆ. ಈ ಮುಂಬಯಿ ನಗರವೆಂದರೆ ಕನಸುಗಳನ್ನು ಹೆರುವ ದೊಡ್ಡ ಯಂತ್ರ. ಈ ನಗರದ ಪ್ರತಿಯೊಂದು ಬೀದಿಯಲ್ಲೂ ಕನಸುಗಳದೇ ದರ್ಬಾರು, ಕನಸುಗಳದೇ ಮೆರವಣಿಗೆ. ಪ್ರತಿ ಕ್ಷಣ, ದೊಡ್ಡ ಕನಸುಗಳು, ಪುಟ್ಟ ಕನಸುಗಳು, ಬಣ್ಣದ ಕನಸುಗಳು, ಬಣ್ಣ ಮಾಸಿದ ಕನಸುಗಳು. ಪಂಚತಾರ ಹೋಟೆಲ್‌ಗಳಲ್ಲಿ ಕುಣಿಯುವ ಕನಸುಗಳು, ಸ್ಲಮ್ಮಿನ ಚರಂಡಿಗಳಲ್ಲಿ ಕುಂಟುವ ಕನಸುಗಳು. ಸಮುದ್ರದಲ್ಲಿ ಚಿಮ್ಮಿ ಕುಪ್ಪಳಿಸುವ ಕನಸುಗಳು, ವಿಮಾನದಲ್ಲಿ ಹಾರುವ ಕನಸುಗಳು. ನಾನು ಅಭಿನೇತ್ರಿಯಾಗಿ ಮುಂಬಯಿಯ ಬೆಳ್ಳಿ ತೆರೆಯನ್ನು ಆಳುತ್ತಿದ್ದ ಕಾಲದಲ್ಲಿ ನನಗೆ ವಿಪರೀತ ಕನಸುಗಳು ಬೀಳುತ್ತಿದ್ದವು.

ಪುಷ್ಪಕ ವಿಮಾನದಲ್ಲಿ ಕುಳಿತು ಹಿಮಾಲಯ ಪರ್ವತಗಳನ್ನು ಸುತ್ತು ಹೊಡೆದಂತೆ, ಸಮುದ್ರದ ಮೇಲೆ ನೃತ್ಯ ಮಾಡಿದಂತೆ, ಕುದುರೆಯನ್ನೇರಿ ಆಗಸದಲ್ಲಿ ಹಾರಿದಂತೆ, ಭೂಮಿಯನ್ನು ಕೊರೆದುಕೊಂಡು ಪಾತಾಳ ಸೇರಿದಂತೆ... ಓಹ್! ಲೆಕ್ಕವಿಲ್ಲದಷ್ಟು ಕನಸುಗಳು. ಕನಸುಗಳಿಂದ ಅನೇಕ ರಾತ್ರಿಗಳಲ್ಲಿ ನಿದ್ದೆಯಿಲ್ಲದೆ ಕಂಗೆಡುತ್ತಿದ್ದೆ. ಆ ಸಂದರ್ಭದಲ್ಲಿ ಶಿವಾಜಿಪಾರ್ಕ್ ಹತ್ತಿರವಿದ್ದ ಪ್ರಸಿದ್ಧ ಮನೋವೈದ್ಯ ದಾಬೋಲ್ಕರರನ್ನು ಭೇಟಿಯಾಗಿದ್ದೆ. 'ಕನಸುಗಳ ಏಕೆ ಬೀಳುತ್ತವೆ? ಕನಸುಗಳಿಗೆ ಅರ್ಥವುಂಟೆ, ಅಥವಾ ಕನಸುಗಳು ಮುಂದೆ ನಡೆಯಬಹುದಾದ ಸಂಗತಿಗಳ ಮುನ್ಸೂಚನೆಯೇ....' ಎಂದು ಕೇಳಿದ್ದೆ. ಡಾಕ್ಟರ್ ದಾಬೋಲ್ಕರ್ ತಮ್ಮ ದಪ್ಪ ಕನ್ನಡಕದೊಳಗಿಂದ ಕಣ್ಣು ಗುಡ್ಡೆಗಳನ್ನು ನನ್ನ ದೇಹದ ಮೇಲೆಲ್ಲ ಒಮ್ಮೆ ಹಾಡಿ ಹೇಳಿದ್ದರು: 'ಈ ಬ್ರಹ್ಮಾಂಡದ ಸೃಷ್ಟಿ, ಜೀವ ಜಗತ್ತಿನ ಹುಟ್ಟು – ಸಾವು ಎಷ್ಟು ನಿಗೂಢವೋ ಕನಸುಗಳ ಚರಿತ್ರೆ ಕೂಡ ಅಷ್ಟೇ ನಿಗೂಢ ಮತ್ತು ವಿಸ್ಮಯ. ವರ್ತಮಾನದಲ್ಲಿ ನಮ್ಮ ದೃಷ್ಟಿಗೆ ನಿಲುಕುವ ಎಲ್ಲಾ ಸಂಗತಿಗಳಿಗೂ ಕೂಡ ಒಂದು ನಿರ್ದಿಷ್ಟವಾದ ವ್ಯಾಖ್ಯೆಯಾಗಲೀ, ಗುರಿಯಾಗಲೀ ಖಂಡಿತವಾಗಿಯೂ ಇಲ್ಲವೇ ಇಲ್ಲ. ಪ್ರಪಂಚದಾದ್ಯಂತ ಲಕ್ಷಾಂತರ ವಿಜ್ಞಾನಿಗಳು, ಮನೋವೈದ್ಯರು ನಿರಂತರವಾಗಿ ಕನಸುಗಳ ಬಗ್ಗೆ ಅಧ್ಯಯನ ನಡೆಸಿದ್ದಾರೆ. ನಡೆಸುತ್ತಲೂ ಇದ್ದಾರೆ. ಎಲ್ಲರೂ ತಮತಮಗೆ ತೋಚಿದಂತೆ ವ್ಯಾಖ್ಯಾನಿಸುತ್ತಾ ಬಂದಿದ್ದಾರೆ. ಆದರೆ ಯಾರೊಬ್ಬರಿಗೂ ಇದುವರೆಗೆ ಕನಸುಗಳು ಹೇಗೆ ಸೃಷ್ಟಿಯಾಗುತ್ತವೆ, ಏಕೆ ಸೃಷ್ಟಿಯಾಗುತ್ತವೆ ಮತ್ತು ಅವುಗಳ ಗುರಿಯೇನು ಎಂಬುದರ ಬಗ್ಗೆ ಒಂದು ಸಣ್ಣ ಚಹರೆ ಕೂಡ ಲಭ್ಯವಾಗಿಲ್ಲ. ಕನಸು ಎಂಬುದು ಒಂದು ಕನಸು ಅಷ್ಟೆ. ಆಕಾಶ, ಭೂಮಿ, ನಕ್ಷತ್ರ, ಸಮುದ್ರ ಎಲ್ಲವೂ ಒಂದು ರೀತಿಯ ಕನಸುಗಳೇ. ಅಷ್ಟೇಕೆ ಪ್ರತಿಯೊಂದು ಜೀವಿಯೂ ಒಂದೊಂದು ಕನಸು. ನಮ್ಮ ದೃಷ್ಟಿಗೆ ನಿಲುಕುವುದು, ನಿಲುಕಿದ್ದು ಎಲ್ಲಾ ಕನಸೇ. ಯಾರು ಯಾವ ವಿಷಯವನ್ನು ಕೂಡ ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲವೋ ಅಂಥವರಿಗೆ ಹೆಚ್ಚು ಕನಸು ಬೀಳುವುದಿಲ್ಲ. ಅಂಥವರು ನಿರಾಳವಾಗಿರುತ್ತಾರೆ. ಧಾರಾವಿಯ ಸ್ಲಮ್ಮಿನಂತೆ...' ಅವರು ತಮ್ಮಲ್ಲಿ ತಾವೇ ಗೊಂದಲದಲ್ಲಿ ಬಿದ್ದು ಬಿಟ್ಟಿದ್ದರು.

ಓ ಚಂದ್ರಮ, ಸೃಷ್ಟಿಗೆ, ದೇಹಕ್ಕೆ, ರಕ್ತಕ್ಕೆ, ಪ್ರಾಣಕ್ಕೆ ಜಾತಿ ಮತ ಭೇದ ಇರುವುದಿಲ್ಲ ಎಂಬುದಕ್ಕೆ ನಾನು ಸಾಕ್ಷಿಯಾದವಳು. ಅಪ್ಪ ಮುಸ್ಲಿಂ ಆದರೆ ಅಮ್ಮ ಹಿಂದೂ. ನಾನು ಹಿಂದೂ ಮುಸ್ಲಿಂ ಎರಡೂ ಆದವಳು. ಈ ಮುಂಬಯಿಯಲ್ಲಿ ಎರಡೂ ಧರ್ಮದವರು ಸಹೋದರರಂತೆ ಬದುಕಿದ್ದಾರೆ. ಎಷ್ಟೋ ಬಾರಿ ಹೊಡೆದಾಡಿಕೊಂಡಿದ್ದಾರೆ. ಬಡಿದಾಡಿಕೊಂಡಿದ್ದಾರೆ. ರಕ್ತವನ್ನು ಚೆಲ್ಲಿ ಪ್ರಾಣಗಳನ್ನು ಕಳೆದುಕೊಂಡಿದ್ದಾರೆ. ಆದರೆ ಇಡೀ ಪ್ರಪಂಚದಲ್ಲಿ ಇರುವುದು ಎರಡೇ ಜಾತಿಯ, ಎರಡೇ ಮತದ ಜನ. ಹಸಿದವರು ಮತ್ತು ಹಸಿವಿಲ್ಲದವರು. ಚಂದ್ರಮ, ನಿನಗೀಗ ನಾನು ಯಾರೆಂಬುದು ಸ್ಪಷ್ಟವಾಗಿರಬೇಕು. ನಿನ್ನ ಊಹೆ ಖಂಡಿತವಾಗಿಯೂ ನಿಜ. ನಾನು ನಿನ್ನ ಮೀನಾ. ಮೀನಿನ ಕಣ್ಣಿನವಳು. ಹುಟ್ಟು ಹುಟ್ಟುತ್ತಲೇ ದುರಂತ ನಾಯಕಿಯಾಗಿ ಮೆರೆದವಳು. ಸಮುದ್ರ ದಂಡೆಯ ಈ ನಗರದಲ್ಲಿ ಶ್ರೀಮಂತರಿಗಿಂತ ಬಡವರೇ ಜಾಸ್ತಿ. ನಾನು ಕೂಡ ಒಂದು ವಿಚಿತ್ರ ಬಡ ಕುಟುಂಬದಲ್ಲಿ ಹುಟ್ಟಿದವಳು. ನಾನು ತುಂಬಾ ಮುದ್ದಾಗಿ ಇದ್ದೆನಂತೆ. ಹುಟ್ಟಿದಾಗಲೇ. ಬಡವರ ಮನೆಗಳಲ್ಲಿ ಮುದ್ದಾದ ಹೆಣ್ಣು ಮಕ್ಕಳ್ಳಂತೂ ಹುಟ್ಟಲೇಬಾರದು. ನನ್ನ ತಂದೆ–ತಾಯಿಗಳಿಗೆ ನಾನು ಮೂರನೆಯ ಹೆಣ್ಣು ಮಗು. ಆಸ್ಪತ್ರೆಯಲ್ಲಿ ದಾದಿಗೆ ಕೊಡಲು ಕೂಡ ಒಂದು ಬಿಡಿಗಾಸು ಇಲ್ಲದೆ ಅಪ್ಪ ನನ್ನನ್ನು ಅನಾಥಾಲಯದಲ್ಲಿ ಬಿಟ್ಟು ಬಂದಿದ್ದನಂತೆ. ಆದರೆ ಅಮ್ಮ ಮತ್ತು ಸಂಬಂಧಿಕರು ಅಪ್ಪನನ್ನು ತೀವ್ರವಾಗಿ ನಿಂದಿಸಲಾರಂಭಿಸಿದಾಗ ಮತ್ತೆ ಅನಾಥಾಲಯದಿಂದ ನನ್ನನ್ನು ಮನೆಗೆ ಎತ್ತಿಕೊಂಡು ಬಂದನಂತೆ.

ಓ ನನ್ನ ಬೆಳಕಿನ ಬೆಲ್ಲದುಂಡೆಯೇ ಕೇಳು. ನಾಲ್ಕು ವರ್ಷದವಳಾಗಿದ್ದಾಗಲೇ ಮನೆಯ ಹತ್ತಿರವಿದ್ದ ಶಾಲೆಯಲ್ಲಿ ಹೋಗಿ ಕುಳಿತುಬಿಡುತ್ತಿದ್ದೆ. ಬೇರೆಲ್ಲ ಮಕ್ಕಳಿಗಿಂತಲೂ ಅಕ್ಷರ ಕಲಿಯಲು ಹೆಚ್ಚಿನ ಆಸಕ್ತಿ ತೋರುತ್ತಿದ್ದೆ. ಮಾಸ್ತರಿಗೆ ನಾನೆಂದರೆ ಎಲ್ಲಿಲ್ಲದ ಸಡಗರ. ಆದರೆ ಅಪ್ಪನಿಗೆ ನಾನು ಶಾಲೆಗೆ ಹೋಗುವುದು ಕಿಂಚಿತ್ತೂ ಇಷ್ಟವಿರಲಿಲ್ಲ. ಅಪ್ಪ ಥಿಯೇಟರ್ ಒಂದರಲ್ಲಿ ಕಾವಲುಗಾರನಾಗಿದ್ದ. ಅಮ್ಮ ಡ್ಯಾನ್ಸರ್. ಸಿನಿಮಾಗಳಲ್ಲಿ ಕೋ ಡ್ಯಾನ್ಸರ್ ಆಗಿ ಕೆಲಸ ಮಾಡುತ್ತಿದ್ದಳು. ಇಬ್ಬರೂ ದುಡಿಯುತ್ತಿದ್ದರೂ ಮನೆಯಲ್ಲಿ ಹೊಟ್ಟೆಗಳು ಸರಿಯಾಗಿ ತುಂಬುತ್ತಿರಲಿಲ್ಲ. ನಾನು ಮುದ್ದಾಗಿರುವುದರ ಜೊತೆಗೆ ಚೂಟಿಯಾಗಿಯೂ ಇದ್ದೆ. ನನ್ನನ್ನು ಅಭಿನೇತ್ರಿಯನ್ನಾಗಿ ಮಾಡಲು ಅಪ್ಪ ಅದ್ಯಾವ ಘಳಿಗೆಯಲ್ಲಿ ನಿರ್ಧರಿಸಿದನೋ, ನನ್ನನ್ನು ತನ್ನ ಹೆಗಲ ಮೇಲೆ ಕೂರಿಸಿಕೊಂಡು ಮುಂಬಯಿಯ ಸ್ಟುಡಿಯೋಗಳಿಗೆ ಅಲೆಯುತ್ತಿದ್ದ. 'ನನ್ನ ಮಗಳು ತುಂಬಾ ಸುಂದರ ಇದ್ದಾಳೆ. ಜೊತೆಗೆ ಒಳ್ಳೆಯ ನಟನಾ ಕೌಶಲ್ಯವಿದೆ. ನಿಮ್ಮ ಸಿನಿಮಾದಲ್ಲಿ ಬಾಲನಟಿಯ ಪಾತ್ರವಿದ್ದರೆ ಕೊಡಿ. ನಿಮ್ಮ ಸಿನಿಮಾಗೆ ಸಕ್ಸೆಸ್ ಗ್ಯಾರಂಟಿ. ಅಂಥ ಅದೃಷ್ಟವಿದೆ ನನ್ನ ಮಗಳಿಗೆ...' ಎಂದು ಅಂಗಲಾಚುತ್ತಿದ್ದ. ಅಪ್ಪನ ದೈನ್ಯತೆಯನ್ನು ನೋಡಿ ನನಗೆ ದುಃಖ ಉಮ್ಮಳಿಸಿ ಬರುತ್ತಿತ್ತು. ಅಂಥ ಒಂದು ದಿನ ಅಪ್ಪನ ಕಣ್ತಪ್ಪಿಸಿ ಶಾಲೆಯಲ್ಲಿ ಅವಿತು ಕುಳಿತಿದ್ದೆ. ಎಲ್ಲೆಲ್ಲೊ ಹುಡುಕಿ ಅಪ್ಪ ಶಾಲೆಗೆ ಬಂದಿದ್ದ ನನ್ನನ್ನು ಕರೆದುಕೊಂಡು ಹೋಗುತ್ತಿದ್ದವನಿಗೆ ಮಾಸ್ತರು. 'ಅಯ್ಯ ಆಲಿಭಕ್ಸ ನಿನ್ನ ಮಗಳು ಮಹಜಾಬೀನ್ ತುಂಬಾ ಚುರುಕಾಗಿದ್ದಾಳೆ. ಬೇರೆಲ್ಲರಿಗಿಂತಲೂ ಅಕ್ಷರ ಚೆನ್ನಾಗಿ ಕಲಿಯುತ್ತಾಳೆ. ಅವಳನ್ನು ಶಾಲೆಯಿಂದ ಬಿಡಿಸಬೇಡ. ಖಂಡಿತವಾಗಿಯೂ ಅವಳು ಮುಂದೆ ಚೆನ್ನಾಗಿ ಓದಿ ಕಲೆಕ್ಟರೋ, ಡಾಕ್ಟರೋ ಆಗುತ್ತಾಳೆ. ಅವಳ ಓದಿಗಾಗಿ ನೀನೇನೂ ನಮ್ಮ ಶಾಲೆಗೆ ಫೀಜು ಕಟ್ಟಬೇಡ. ನಾನು ನೋಡ್ಕೋತೀನಿ....' ಎಂದು ಕೇಳಿಕೊಂಡಿದ್ದರು. ಮಾಸ್ತರ ಮಾತುಗಳಿಗೆ ಅಪ್ಪ ನಗುತ್ತಾ 'ಎಂಥ ಅದ್ಭುತ ಮಾತುಗಳನ್ನಾಡಿದಿರಿ ಮಾಸ್ತರೆ. ಕನಸು ಕಾಣುವುದಕ್ಕೂ ಒಂದು ಮಿತಿ ಇರಬೇಕು ಮಾಸ್ತರೆ. ಅಕ್ಷರಕ್ಕಿಂತ ಹೊಟ್ಟೆ ಮುಖ್ಯ. ಬಡವರ ಕರುಳಿನ ಕೂಗು ಯಾರಿಗೂ ಕೇಳಿಸುವುದಿಲ್ಲ ಮಾಸ್ತರೆ...' ಎಂದು ಹೊಟ್ಟೆಯನ್ನು ಕೈಯಿಂದ ಸವರಿಕೊಂಡ. ಮಾಸ್ತರು ಮಾತಿಲ್ಲದಂತಾಗಿ ಬಿಟ್ಟರು. ಅಪ್ಪನ ಅಸಹಾಯಕತೆ ನನ್ನನ್ನು ಕಂಗೆಡಿಸಿತ್ತು. ನಾನು ಮತ್ತೆ ಶಾಲೆಯ ಕಡೆ ಹೆಜ್ಜೆಯಿಡಬಾರದೆಂದು ಅಂದೇ ತೀರ್ಮಾನಿಸಿಬಿಟ್ಟೆ.